# ಎಂಥ ಪುಣ್ಯವೆ ನಿನ್ನದೆಂಥ ಭಾಗ್ಯವೆ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 8
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 97
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 95
4. **Note:** Lyrics given without highlights are as per Ref. 1. The wordings given in Ref. 1 and Ref. 2 are slightly different and are not considered here.
5. **Note:** Singer has followed these lyrics.

ರಾಗ: ಸಾವೇರಿ ತಾಳ: ಛಾಪು

ಎಂಥ ಪುಣ್ಯವೆ ನಿನ್ನದೆಂಥ ಭಾಗ್ಯವೆ ಗೋಪಿ
ಇಂಥ ಮಗನ ಕಾಣೆವೆ ॥ ಪ ॥

ಚಿಂತಿಸಿದರೂ ದೊರಕ ಚೆಲುವ ರಾಜಗೋಪಾಲ
ಇಂತೀ ಮಾತುಗಳೆಲ್ಲವು - ಹುಸಿಯಲ್ಲವು ॥ ಅಪ ॥

ಸರಸಿಜನಾಭನ ಸುಮ್ಮನೆ ಕೊಂಡಾಡೆ
ದುರಿತವೆಲ್ಲವು ಪೋಪುದೆ
ಸರಸದಿಂದಲಿ ಒಮ್ಮೆ ಸವಿಮಾತನಾಡಿದರೆ
ಪರಿತೋಷ ಕೈಗೂಡುವುದೆ - ಯಶೋದೆ ॥ 1 ॥

ಊರ ಒಳಗೆ ನಿಮ್ಮ ಅಂಜಿಕೆ ನೆರೆಹೊರೆ
ದೂರಿಕೊಂಬುವರಲ್ಲವೆ ?
ಅರಣ್ಯದಲಿ ನಾವು ಆಡಿದ ಆಟವು
ಆರಿಗಾದರೂ ಉಂಟೇನೆ – ಇಂದುವದನೇ ? ॥ 2 ॥

ನಿನ್ನ ಮಗನ ಕರೆಯೆ ಎನ್ನ ಪ್ರಾಣದೊಡೆಯ

ಪುಣ್ಯದ ಫಲವು ಕಾಣೆ
ಚೆನ್ನ ಶ್ರೀ ಪುರಂದರ ವಿಠಲ ರಾಯನ
ನಿನ್ನಾಣೆ ಬಿಡಲಾರೆವೆ - ಪುಸಿಯಲ್ಲವೆ     || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಪಿಕಾ ಸ್ತ್ರೀಯರು ಯಶೋದೆಯ ಪುಣ್ಯವನ್ನು ಈ ಹಾಡಿನಲ್ಲಿ ಕೊಂಡಾಡಿದ್ದಾರೆ.

**ಪರಿತೋಷ =** ಸಂತೋಷ
**ಕೈಗೂಡು =** ನೆರವೇರು

**Classification:** Keerthane
**Ankita:** sri purandara vittala
**Location:** NA
**Category:** Krishna Leele,
**Sub-Category:** punya, Bhagya, gopi, yashode, maga, chinte, Gopala, Krishna, santosha, ooru, bhaya, kaadu, ATa, ADu,
**Pravachana:** NA
**Explanation:** NA